# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 764 |
| ಸದಸ್ಯರ ಹೆಸರು | : | ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 23.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸರ್ಕಾರದ ನಿರ್ಣಯದಂತೆ KIADB ಮಂಡಳಿಯಲ್ಲಿ ನಿವೇಶನ ಹಂಚಿಕೆ ಪಡೆದ ಉದ್ದಿಮೆದಾರರು ಸತತವಾಗಿ 2 ವರ್ಷ ಯೋಜನೆ ಕಾರ್ಯಗತಗೊಳಿಸಿದ್ದರೆ ಕ್ರಯಪತ್ರ ವಿತರಿಸಬಹುದಾಗಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಸಿಐ 132 ಎಸ್‌ಪಿಕ್ಯೂ (ಇ) 2021, ದಿನಾಂಕ: 01.01.2022ರ ಆದೇಶದಲ್ಲಿ ತಿಳಿಸಿರುವ ಮೇರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಹಂಚಿಕೆ ಪಡೆದ ಉದ್ದಿಮೆದಾರರಿಗೆ ಶುದ್ಧ ಕ್ರಯಪತ್ರ ನೆರವೇರಿಸಲಾಗಿರುತ್ತದೆ.<br><br>"ಉದ್ದಿಮೆದಾರರು ಹಂಚಿಕೆ ಪಡೆದ ನಿವೇಶನದಲ್ಲಿ ಶೇ.50 ಕ್ಕಿಂತ ಹೆಚ್ಚು ವಿಸ್ತೀರ್ಣದ ಜಾಗವನ್ನು ಯೋಜನೆ ಅನುಷ್ಠಾನಕ್ಕಾಗಿ ಉಪಯೋಗಿಸಿದ್ದು, ಉದ್ದಿಮೆಯು ಸತತ ಎರಡು ವರ್ಷಗಳ ಕಾಲ ಉತ್ಪಾದನೆಯಲ್ಲಿದ್ದಲ್ಲಿ ಮತ್ತು ಮಂಡಳಿಯ ಗುತ್ತಿಗೆ ಕರಾರಿನ ಇತರೆ ಎಲ್ಲಾ ನಿಯಮಾವಳಿಗಳನ್ನು ಪಾಲಿಸಿದ್ದಲ್ಲಿ, ಅಂತಹ ಪ್ರಕರಣಗಳಿಗೆ 10 ವರ್ಷಗಳ ಗುತ್ತಿಗೆ ಅವಧಿಯ ಮಧ್ಯದಲ್ಲಿಯೇ ಶುದ್ಧಕ್ರಯ ನೆರವೇರಿಸುವುದು.<br><br>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಕೇಂದ್ರ ಸರ್ಕಾರದ ಸಂಸ್ಥೆಗಳು, ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ಯಮಗಳು (PSU's), ರಾಜ್ಯ ಸರ್ಕಾರದ ಸಂಸ್ಥೆಗಳು, ರಾಜ್ಯ ಸರ್ಕಾರದ ಅಧೀನ ಸಂಸ್ಥೆಗಳು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಉದ್ಯಮಗಳಿಗೆ ಹಂಚಿಕೆಯನ್ನು ಎರಡು ವರ್ಷಗಳ ಲೀಸ್-ಕಂ-ಸೇಲ್ ಆಧಾರದ ಮೇಲೆ ನೀಡತಕ್ಕದ್ದು. ಸದರಿ ಉದ್ದಿಮೆಗಳು ಶೇ.50 ಕ್ಕಿಂತ ಹೆಚ್ಚು ವಿಸ್ತೀರ್ಣದ ಜಾಗವನ್ನು ಯೋಜನೆ ಅನುಷ್ಠಾನಕ್ಕಾಗಿ ಉಪಯೋಗಿಸಿದ್ದು, ಗುತ್ತಿಗೆ ಕರಾರಿನ ಇತರೆ ನಿಯಮಾವಳಿಗಳನ್ನು ಪಾಲಿಸಿದ್ದಲ್ಲಿ, ಎರಡು ವರ್ಷದ ಗುತ್ತಿಗೆ ಅವಧಿಯ ಮಧ್ಯದಲ್ಲಿ ಅಥವಾ ಎರಡು ವರ್ಷದ ಗುತ್ತಿಗೆ ಕರಾರಿನ ಅಂತ್ಯದಲ್ಲಿ ಶುದ್ಧಕ್ರಯವನ್ನು ನೆರವೇರಿಸುವುದು. ಅದರಂತೆ, ಹಾಲಿ ನೆರವೇರಿಸಲಾಗಿರುವ ಗುತ್ತಿಗೆ ಕರಾರು ನಿಯಮಾವಳಿಗಳನ್ನು ಪರಿಷ್ಕರಿಸುವುದು" |
| ಆ) | ಈ ರೀತಿ ನಿರ್ಣಯವನ್ನು KSSIDC ನಿಗಮದಲ್ಲಿ ಜಾರಿಗೆ ತರಲು ಉದ್ದಿಮೆದಾರರಿಂದ ಮನವಿ ಸ್ವೀಕರಿಸಿದ್ದಲ್ಲಿ KIADB ಯಲ್ಲಿನ ತೀರ್ಮಾನದಂತೆ KSSIDC ನಿಗಮದಲ್ಲೂ ಜಾರಿಗೆ ತರಲು ಸರ್ಕಾರಕ್ಕೇನಾದರೂ ತೊಡಕುಗಳಿದ್ದಲ್ಲಿ ಅವುಗಳನ್ನು ನಿವಾರಿಸಿ 2 ವರ್ಷ ಕಾರ್ಯಾರಂಭ ಮಾಡಿದ ಘಟಕಗಳಿಗೆ ಕ್ರಯಪತ್ರ ವಿತರಿಸಲು ತೆಗೆದುಕೊಂಡ ಕ್ರಮಗಳಾವುವು? (ವಿವರ ಒದಗಿಸುವುದು) | KIADB ಮಂಡಳಿಯಲ್ಲಿ ನಿವೇಶನ ಹಂಚಿಕೆ ಪಡೆದ ಉದ್ದಿಮೆದಾರರು ಸತತವಾಗಿ 2 ವರ್ಷ ಯೋಜನೆ ಕಾರ್ಯಗತಗೊಳಿಸಿದ್ದರೆ ಕ್ರಯಪತ್ರ ವಿತರಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿರುತ್ತದೆ. ಇದೇ ರೀತಿಯಾಗಿ KSSIDC ನಿಗಮದಲ್ಲಿ ಜಾರಿಗೊಳಿಸಲು ಉದ್ದಿಮೆದಾರರಿಂದ ಮನವಿಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಪರಿಗಣನೆಯಲ್ಲಿರುತ್ತದೆ. |

ಸಿಐ 170 ಸಿಎಸ್‌ಸಿ 2024

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.